ಸಂಖ್ಯೆ: ಪಿಸಿಸಿಎಫ್/ಸಿ/ಜಿಎಲ್– 8 /ಪಾ.ಟಿ/2016–17

ಪ್ರಧಾನ ಮುಖ್ಯಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ಯವರಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು–3, ದಿನಾಂಕ: 24–10–2016.

## ಅಧಿಕೃತ ಜ್ಞಾಪನಾ ಪತ್ರ

**ವಿಷಯ:** 2016–17ನೇ ಸಾಲಿಗೆ ಅರಣ್ಯ ಇಲಾಖೆಗೆ ಎಲ್‌ಡಿಪಿಇ ಪಾಲಿಥೀನ್‌ಚೀಲ, ಶೀಟ್ ಮತ್ತು ಹೆಚ್‌ಡಿಪಿಇ ನೇಯ್ದ ಚೀಲಗಳನ್ನು ಅಂಗೀಕೃತ ಉತ್ಪಾದಕ/ ಸರಬರಾಜು ಉದ್ದಿಮೆದಾರರ ಇ–ಟೆಂಡರ್ ದರಗಳನ್ನು ಅಂಗೀಕರಿಸುವ ಬಗ್ಗೆ.

**ಉಲ್ಲೇಖ:**

1) ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಪಿಸಿಸಿಎಫ್/ಸಿ/ಜಿಲ್–36 ಪಾ.ಟೀ/2015–16 ದಿನಾಂಕ: 18.11.2015.
2) ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಪಿಸಿಸಿಎಫ್/ಸಿ/ಜಿಲ್–17ರಿಂದ 29/ಪಾ.ಟೀ /2015–16 ದಿನಾಂಕ: 08.08.2016 (13 ಟೆಂಡರ್).
3) ಈ ಕಛೇರಿ ಇ–ಟೆಂಡರ್ ಸಮಿತಿಯ ತಾಂತ್ರಿಕ ಮತ್ತು ದರ ಟೆಂಡರ್ ಸಭೆಯ ನಡವಳಿ ದಿನಾಂಕ 18.10.2016.

–0–

**ಪ್ರಸ್ತಾವನೆ :**

ಕರ್ನಾಟಕ ಅರಣ್ಯ ಇಲಾಖೆಯ ವಿವಿಧ ಅರಣ್ಯ ವಿಭಾಗಗಳ 2016–17ನೇ ಸಾಲಿನಲ್ಲಿ ಎಲ್‌ಡಿಪಿಇ, ಪಾಲಿಥೀನ್‌ಚೀಲ, ಶೀಟ್ ಮತ್ತು ಹೆಚ್‌ಡಿಪಿಇ ನೇಯ್ದ ಚೀಲಗಳನ್ನು ಸರಬರಾಜಿಗೆ ದರ ನಿಗದಿಪಡಿಸುವ ಬಗ್ಗೆ ಉಲ್ಲೇಖ (2)ರಂತೆ 13 ಟೆಂಡರ್ ಕರೆಯಲಾಗಿತ್ತು. ಈ ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆದು ಮತ್ತು ಬೆಂಗಳೂರು ವೃತ್ತದ ಆರ್ಥಿಕ ಬಿಡ್‌ನ್ನು ತೆರೆದ ಸಮಯದಲ್ಲಿ ಈ ಕೆಳಗಿನಂತೆ ಪ್ರಮುಖವಾದ ನ್ಯೂನತೆಗಳು ಕಂಡುಬಂದಿರುತ್ತದೆಯೆಂದು Tender Scrutiny ಸಮಿತಿ ಅಭಿಪ್ರಾಯಪಟ್ಟಿರುತ್ತದೆ. ಟೆಂಡರ್‌ನಲ್ಲಿ ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು 8 ವಸ್ತುಗಳಿಗೂ ಒಂದೇ ಫಾರಂ ನೀಡಿರುವುದರಿಂದ ಬಿಡ್‌ದಾರರು ಕನಿಷ್ಠ ಒಂದು ವಸ್ತುವಿಗೆ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದರೂ ಸಹ ಆ ವಸ್ತುವಿನ ಆರ್ಥಿಕ ಬಿಡ್ ತೆರೆದಲ್ಲಿ ಅವರ ತಿರಸ್ಕೃತ ಬಿಡ್‌ಗಳು ಸಹ ತೆರೆಯಲಾಗುತ್ತಿದೆ. ಟೆಂಡರ್‌ನಲ್ಲಿ ಸಾಂಪಲ್‌ನ್ನು ಸಲ್ಲಿಸಲು ತಿಳಿಸಿದ್ದರೂ, ಅದರ ಪ್ರಮಾಣ ಮತ್ತು ಸಂಖ್ಯೆ ನಿಗದಿಪಡಿಸಿರುವುದಿಲ್ಲ. ಖರೀದಿಸುವ ವಸ್ತುಗಳ ಗುಣಮಟ್ಟವನ್ನು ಖಾತ್ರಿಗೊಳಿಸಲು ಹರಾಜುದಾರರು ಸಲ್ಲಿಸಿರುವ ಸಾಂಪಲ್‌ಗಳ ಸಂಖ್ಯೆ ಮತ್ತು ಪ್ರಮಾಣ ಕಡಿಮೆಯಾಗಿರುತ್ತದೆ. ಎಲ್‌ಡಿಪಿಇ ಪಾಲಿಥೀನ್ ಚೀಲಗಳು, ಪಾಲಿಥೀನ್ ಹಾಳೆಗಳು ಮತ್ತು ಹೆಚ್‌ಡಿಪಿಇ ನೇಯ್ದ ಚೀಲಗಳ ಖರೀದಿಗೆ ಪ್ರತ್ಯೇಕವಾಗಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ ಮತ್ತು ಈ ನ್ಯೂನತೆಗಳನ್ನು ಸರಿಪಡಿಸಲು ಈ ಹರಾಜನ್ನು ರದ್ದುಪಡಿಸಿ ಆಯಾ ವೃತ್ತಮಟ್ಟದಲ್ಲಿ ಮರು ಹರಾಜು ನಡೆಸಲು ಶಿಫಾರಸ್ಸು ಮಾಡಿರುತ್ತಾರೆ. ಟೆಂಡರ್ ಪ್ರಕ್ರಿಯೆಯನ್ನು ಉತ್ತಮಪಡಿಸಲು ಇನ್ನು ಕೆಲವು ಸಲಹೆಗಳನ್ನು ನೀಡಿರುತ್ತಾರೆ. ದಿನಾಂಕ 20.10.2016ರಲ್ಲಿ ನಡೆದ ವಿವಿಧ ವೃತ್ತದ ನೋಡಲ್ ಅಧಿಕಾರಿಗಳ ಸಭೆಯಲ್ಲಿಯೂ ಸಹ ಈ ವಸ್ತುಗಳನ್ನು ಇ–ಟೆಂಡರ್ ಪ್ರಕ್ರಿಯೆಯಲ್ಲಿ ಅರಣ್ಯ ಇಲಾಖೆಯಲ್ಲಿ ಖರೀದಿಸುತ್ತಿರುವುದರಿಂದ ಈ ಖರೀದಿ ಅಧಿಕಾರವನ್ನು ಆಯಾ ವೃತ್ತದ ಮಟ್ಟದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ನೀಡುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿರುತ್ತದೆ. ಆಡಳಿತ ಹಿತದೃಷ್ಟಿಯಿಂದಲೂ ಈ ಅಧಿಕಾರವನ್ನು ವಿಕೇಂದ್ರೀಕರಣ

ಗೊಳಿಸುವ ಅವಶ್ಯಕತೆ ಇರುತ್ತದೆ. ಆದುದರಿಂದ Tender Scrutiny ಸಮಿತಿಯ ಶಿಫಾರಸ್ಸನ್ನು ಅಧಿಕಾರದ ವಿಕೇಂದ್ರೀಕರಣ, ಸಾರ್ವಜನಿಕ ಮತ್ತು ಆಡಳಿತ ಹಿತದೃಷ್ಟಿಯಿಂದ ಒಪ್ಪಿಕೊಂಡು ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರಿದ ಕಾರಣಗಳಿಂದ ಉಲ್ಲೇಖ (2)ರ ಈ ಕಚೇರಿಯ ಟೆಂಡರ್ ಅಧಿಸೂಚನೆಯಲ್ಲಿ ಇಲಾಖೆಯ 13 ವೃತ್ತಗಳಿಗೆ 2016–17ರ ಅವಧಿಗೆ ಎಲ್‌ಡಿಪಿಇ, ಪಾಲಿಥೀನ್‌ಚೀಲಗಳು, ಎಲ್‌ಡಿಪಿಇ ಪಾಲಿಥೀನ್ ಹಾಳೆಗಳು ಮತ್ತು ಹೆಚ್‌ಡಿಪಿಇ ನೇಯ್ದ ಚೀಲಗಳ ಪೂರೈಕೆಗಾಗಿ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಪಿಸಿಸಿಎಫ್/ಸಿ/ಜಿಎಲ್–17ರಿಂದ 29/ಪಾ.ಚೀ /2015–16 ದಿನಾಂಕ: 08.08.2016 (13 ಟೆಂಡರ್)ನಡೆಸಿದ ಟೆಂಡರ್‌ನ್ನು ಕೆಟಿಪಿಪಿ ಕಾಯ್ದೆ ನಿಯಮ 14ರಲ್ಲಿ ಪ್ರಾಪ್ತವಾದ ಅಧಿಕಾರದಂತೆ ತಿರಸ್ಕರಿಸಿದೆ/ರದ್ದುಗೊಳಿಸಿದೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ ಕಂಡುಬಂದ ತಾಂತ್ರಿಕ ನ್ಯೂನತೆಗಳನ್ನು ಸರಿಪಡಿಸಿ ಮರು ಹರಾಜನ್ನು ಇ–ಟೆಂಡರ್ ಮುಖಾಂತರ ಆಯಾ ವೃತ್ತಮಟ್ಟದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ನಡೆಸಲು ಆದೇಶಿಸಲಾಗಿದೆ.

ಪ್ರಧಾನ ಮುಖ್ಯಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.**

1. ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ವಂದನೆಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಅರಣ್ಯ ಭವನ, ಬೆಂಗಳೂರು
3. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
4. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
5. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
6. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ/ವನ್ಯಜೀವಿ/ಸಾಮಾಜಿಕ ಅರಣ್ಯ/ಸಂಶೋಧನೆ
7. ಹರಾಜಿನಲ್ಲಿ ಭಾಗವಹಿಸಿದ ಎಲ್ಲಾ ಉತ್ಪಾದಕ/ ಸರಬರಾಜು ಸಂಸ್ಥೆಗಳ ಮಾಹಿತಿಗಾಗಿ.